## 19

# ಅಂತ್ಯಾಶೀರ್ವಾದ:
# ಶಾಂತಿ ಮತ್ತು ಸಮಾಧಾನದ ಆಶೀರ್ವಾದ
# (6:21-24)

ಪೌಲನು ಎಫೆಸದವರಿಗೆ ತನ್ನ ಪತ್ರವನ್ನು ಆರಂಭಿಸುವಾಗ, ಸಭೆಯ ಬಗೆಗಿನ ದೊಡ್ಡ ಸತ್ಯದ ಮೇಲೆ ಕೇಂದ್ರಿಕರಿಸಿದನು. ಎಲ್ಲಾ ಆತ್ಮೀಕ ಸಿಕ್ಕುವ ಆಶೀರ್ವಾದಗಳನ್ನು ಕ್ರಿಸ್ತನಲ್ಲಿ ತರುವದಕ್ಕೋಸ್ಕರ ಮನುಕುಲಕ್ಕೆ ಆಸ್ಪದ ಕೊಡುವದಕ್ಕೆ ದೇವರು ಹೇಗೆ ಕಾರ್ಯಮಾಡಿದನು ಎಂದು ತೋರಿಸುವುದಾಗಿದೆ. ವಿಶ್ವಾಸಿಗಳನ್ನು ಸಭೆಯ ಭಾಗವಾಗಿಸುವುದರ ಮೂಲಕ ದೇವರ, ಕ್ರಿಸ್ತನ, ಮತ್ತು ಪರಿಶುದ್ಧಾತ್ಮನ ಸಂಬಂಧದೊಡನೆ ಪ್ರವೇಶಿಸುವದಾಗಿದೆ (1:1-23). ಮನುಷ್ಯನು ತನ್ನನ್ನು ತಾನು ರಕ್ಷಿಸಿಕೊಳ್ಳುವಲ್ಲಿ ಅಸಾಹಯಕನೂ ಮತ್ತು ನಿರೀಕ್ಷಾರಹಿತನೂ ಆಗಿದ್ದಗ್ಯೂ, ದೇವರು ತನ್ನ ಕರುಣೆ ಮತ್ತು ಪ್ರೀತಿಯ ಮತ್ತು ಕೃಪೆಯ ಕಾರಣದಿಂದ, ಮನುಷ್ಯನನ್ನು ತಾನೇ ಮರುಸಂಧಾನಕ್ಕೋಸ್ಕರ ತನ್ನ ಮಗನನ್ನು ಶಿಲುಬೆಯಲ್ಲಿ ಮರಣಿಸಲು ಕೊಟ್ಟನು. ದೇವರ ಕುಟುಂಬದಲ್ಲಿ ದೇವರ ರಕ್ಷಣಾ ವರವನ್ನು ಮತ್ತು ಆತನ ಆತ್ಮೀಕ ಕಟ್ಟುವಿಕೆಯನ್ನು (2:1-22) ಒಪ್ಪಿಕೊಳ್ಳುವವರು; ಅವರು ಕ್ರಿಸ್ತನ ದೇಹದ ಸಭೆಯ ಸದಸ್ಯರಾಗಿದ್ದಾರೆ. ಇವೆಲ್ಲವೂ "ಕ್ರಿಸ್ತನಲ್ಲಿ" ಸಾಧ್ಯವಾದದ್ದಾಗಿದೆ. ಗಲಾತ್ಯ 3:26, 27 ಮತ್ತು ರೋಮಾಪುರ 6:3, 4ರಲ್ಲಿರುವಂತ ಇಂಥ ವೇದಭಾಗಗಳಲ್ಲಿ ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ಹೇಗೆ ಪ್ರವೇಶಿಸಬಹುದು ಎಂದು ಪೌಲನು ವಿವರಿಸಿದ್ದಾನೆ.

ದೇವರು ಮನುಷ್ಯನಿಗೆ ತಿಳಿಯದಂಥ "ರಹಸ್ಯಗಳನ್ನು" ಕಾಲಗಳ ಮೊದಲೇ ಪ್ರಕಟಿಸಿದ್ದಾನೆ. ಪೌಲನಿಗೆ ಮತ್ತು ಸಭೆಗೆ ಇರುವ ಎಂದರೆ ಎಲ್ಲಾ ಜನರಿಗೂ ದೇವರ ದೊಡ್ಡ ಉದ್ದೇಶವನ್ನು ವಿವರಿಸುವದು ಆಗಿದೆ. ಸಂದೇಶದ ಮೂಲ ಸತ್ಯಾಂಶವು ಅದು ಅನ್ಯಜನರಿಗೆ, ಇದ್ದು ಅದರಂತೆಯೇ ಯೆಹೂದಿಗಳು ಸಭೆಯ ಭಾಗವಾಗಿರುವವರಾಗಿದ್ದಾರೆ. ಪೌಲನು ಸಭೆಯ ಬಲಕ್ಕಾಗಿ ಮತ್ತು ರಹಸ್ಯವನ್ನು ತಿಳಿಯುವಲ್ಲಿನ ಅದರ ಕಾರ್ಯದ ಸಂಪೂರ್ಣತೆಯನ್ನು ಅರಿತುಕೊಳ್ಳುವದಕ್ಕಾಗಿ ಪ್ರಾರ್ಥಿಸಿದನು (3:1-21).

ಮೊದಲಾರ್ಧ ಪತ್ರದಲ್ಲಿ ಈ ಶ್ರೇಷ್ಟ ಸತ್ಯಗಳನ್ನು ಹೊಂದಿಕೊಂಡದ್ದು ಎಫೆಸದವರ ಮುಂದಿತ್ತು, ಎರಡನೆಯ ಅರ್ಧದಲ್ಲಿ ಪೌಲನು ಈ ಸತ್ಯಗಳ ಪ್ರಾಯೋಗಿಕ ಅನ್ವಯವನ್ನು ಅವರ ಜೀವಿತಕ್ಕೆ ಮಾಡಿದ್ದಾನೆ. (1) ತಮಗೋಸ್ಕರ, ದೇವರಿಗೆ, ಇತರರಿಗೆ, ಮತ್ತು ವಾಕ್ಯಕ್ಕೆ ಮತ್ತು ನೂತನ ಸ್ವಭಾವವನ್ನು ಧರಿಸುವದರ ಮೂಲಕ "[ಅವರ] ಯೋಗ್ಯವಾದ ಕರೆಯುವಿಕೆಯ ರೀತಿಯಲ್ಲಿ ನಡೆಯುವದಕ್ಕಾಗಿ" ಅವರನ್ನು ಪ್ರೋತ್ಸಾಹಿಸುವದು. ಯೋಗ್ಯವಾದ ನಡೆಯು ಅವರನ್ನು ಕ್ರಿಸ್ತನಲ್ಲಿ ಒಂದಾಗಿರುವದಕ್ಕೆ ಸಮರ್ಥರನ್ನಾಗಿಸುವದಾಗಿದೆ (4:1-32). (2) ಆತನು ಅವರಿಗೆ "ಪ್ರೀತಿಯಲ್ಲಿ ನಡೆಯಲು" ಹೇಳಿದನು. ಅವರು ಪ್ರೀತಿಯಲ್ಲಿ ನಡೆಯುವಾಗ ಅವರು ದೇವರ ಮತ್ತು ಕ್ರಿಸ್ತನನ್ನು ಅನುಸರಿಸುವವರಾಗಿರುತ್ತಾರೆ. (3) ಕತ್ತಲೆಯ ಕೆಟ್ಟ ಕಾರ್ಯಗಳನ್ನು ಬಿಟ್ಟುಬಿಡುವ ಮೂಲಕ ಅವರು "ಬೆಳಕಿನ ಮಕ್ಕಳಾಗಿ ನಡೆಯುತ್ತಾರೆ" (5:1-14). (4) ಆತ್ಮದಿಂದ ತುಂಬಿರುವವರಾಗಿ ಇರುವ ಮೂಲಕ ಜಾಗರೂಕರಾಗಿ ಜ್ಞಾನದಲ್ಲಿ ನಡೆಯಲು, ಸಂಬಂಧಗಳಲ್ಲಿ ಪರಸ್ಪರ ಗೌರವವನ್ನು ತೋರಿಸುವದರ ಮೂಲಕ ಮತ್ತು

ದೇವರ ಸರ್ವಾಯುಧಗಳನ್ನು ಧರಿಸಿಕೊಂಡಂತಹ ಅವರು ಕೆಟ್ಟ ಶಕ್ತಿಯ ವಿರುದ್ಧ ನಿಲ್ಲಲು ಮತ್ತು ಸಂಪೂರ್ಣವಾಗಿ ಪ್ರಾರ್ಥನೆಯಲ್ಲಿ ತೊಡಗಲು ಆತನು ಅವರಿಗೆ ಸವಾಲನ್ನು ಒಡ್ಡುತ್ತಾನೆ. ದೇವರು ಎಫೆಸದವರಿಗೆ ರಕ್ಷಣೆಯನ್ನು ಮಾತ್ರ ಕೊಡಲಿಲ್ಲ ಆದರೆ ಕೆಟ್ಟತನದ ಬಲವಾದ ಬಲದ ವಿರುದ್ಧ ವಿಜಯಶಾಲಿಗಳಾಗಲು ಅವಶ್ಯವಾದಂಥ ಸಂಪನ್ಮೂಲಗಳನ್ನೂ ಕೂಡಾ ಅವರಿಗೆ ಕೊಡುವವನಾಗಿದ್ದಾನೆ ಎಂದು ಪೌಲನು ಒತ್ತಿ ಹೇಳಿದ್ದಾನೆ (5:15-6:20).

ಪೌಲನು ಈ ಪತ್ರವನ್ನು ಮುಗಿಸುತ್ತಿದ್ದಂತೆಯೇ, ಆತನು ಕೆಲ ವೈಯಕ್ತಿಕ ವಂದನೆಗಳನ್ನು ಸೇರಿಸಿದ್ದಾನೆ. ತನ್ನದೇ ಆದ ಸ್ಥಿತಿಯಲ್ಲಿರುವಂಥ ಸಹೋದರರನ್ನು ಅವರ ಮನಸ್ಸನ್ನು ಸರಳವಾಗಿಸುವ ನಿಟ್ಟಿನಲ್ಲಿ ಪ್ರೋತ್ಸಾಹಿಸುವವನಾಗಿದ್ದಾನೆ.

## ಪೌಲನ ಸ್ಥಿತಿಯಲ್ಲಿ ಸುದ್ದಿಗಳು
## (6:21, 22)

**21ನನ್ನ ಸಂಗತಿಗಳು ನಿಮಗೆ ಸಹ ಗೊತ್ತಾಗುವ ಹಾಗೆ ಪ್ರಿಯ ಸಹೋದರನೂ ಕರ್ತನಲ್ಲಿ ನಂಬಿಗಸ್ತನಾದ ಸೇವಕನೂ ಆಗಿರುವ ತುಖಿಕನು ನಿಮಗೆ ಎಲ್ಲವನ್ನೂ ತಿಳಿಸುವನು. 22ನೀವು ನಮ್ಮ ಸಮಾಚಾರವನ್ನು ತಿಳುಕೊಳ್ಳುವ ಹಾಗೆಯೂ ಅವನು ನಿಮ್ಮ ಹೃದಯಗಳನ್ನು ಸಂತೈಸುವ ಹಾಗೆಯೂ ಅವನನ್ನು ನಿಮ್ಮ ಬಳಿಗೆ ಕಳುಹಿಸಿದ್ದೇನೆ.**

**ವಚನಗಳು 21, 22.** ರೋಮದ ಸೆರೆಯಲ್ಲಿದ್ದ ಪೌಲನು ತನ್ನ ಸ್ಥಿತಿಯ ಬಗ್ಗೆ ತನ್ನ ಓದುಗರಿಗೆ ಭರವಸೆಯನ್ನು ಕೊಡುವವರೆಗೂ ಆತನು ತನ್ನ ಪತ್ರವನ್ನು ಸಮಾರೋಪಿಸಲಿಲ್ಲ. ತಾನು ಹೇಗೆ ಮಾಡುತ್ತಿದ್ದಾನೆ ಎಂಬುದು ಆ ಪೌಲನ ಇಚ್ಛೆಯಾಗಿತ್ತು ಮತ್ತು ಆತನ ಬಗ್ಗೆ ತಿಳಿಯಬೇಕು ಮತ್ತು ಪೌಲ ಮತ್ತು ಎಫೆಸದವರಲ್ಲಿದ್ದ ಹತ್ತಿರ ಸಂಬಂಧದ ಮತ್ತು ಪರಸ್ಪರ ಪ್ರೀತಿಯ ಬಗ್ಗೆ ಸ್ಪಷ್ಟವಾಗಿ ಮಾತನಾಡಬೇಕೆಂಬುದು ಅವರ ಇಚ್ಛೆಯಾಗಿತ್ತು.

ಆದಿಯ ರೋಮಾಪುರ ಸೆರೆಯಲ್ಲಿ, ಪೌಲನು ಎಫೆಸದವರಿಗೆ, ಫಿಲಿಪ್ಪಿಯರಿಗೆ, ಕೊಲಸ್ಸೆಯವರಿಗೆ, ಮತ್ತು ಫಿಲೋಮೋನನಿಗೆ ಪತ್ರಗಳನ್ನು ಬರೆದನು. ಆತನ ಅನೇಕ ಸ್ನೇಹಿತರು, ಒಂದು ಸಾರಿ ಅಥವಾ ಇನ್ನೊಂದು ಬಾರಿ, ಆತನ ಸೆರೆಮನೆವಾಸದ ಆರಂಭದಲ್ಲಿ ಆತನೊಡನೆ ಇದ್ದರು. ತಿಮೋಥೆಯನು ಮತ್ತು ಎಫೆದ್ರೋತನ, ಕೆಲ ಹೆಸರಿಲ್ಲದ "ಸಹೋದರರ" ಮತ್ತು ... ಕೈಸರನ ಮನೆಯವರ ಬಗೆಗೆ ಸಭೆಯ ಬಗ್ಗೆ ಫಿಲಿಪ್ಪಿಯಲ್ಲಿ ಆತನು ಮಾತನಾಡಿದ್ದಾನೆ (1:1; 2:19-30; 4:18, 21-23). ಫಿಲೊಮೋನನಿಗೆ ಬರೆದ ಆತನ ಪತ್ರದಲ್ಲಿ, ಆತನು ತಿಮೋಥೆಯನು ಬರೆದ ಪತ್ರದಲ್ಲಿ **ತುಖಿಕನ** ಹೆಸರನ್ನು ಮಾತ್ರ ಇದೆ. ಕೊಲಸ್ಸೆಯ ಪಟ್ಟಿಯಲ್ಲಿ ತಿಮೋಥೆಯ, ಒನೆಸೀಮನು, ಅರಿಸ್ತಾರ್ಕ, ಮಾರ್ಕ, ಯೂಸ್ತ, ಎಫ್ರ, ಲೂಕ ಮತ್ತು ದೇಮ ಇವುಗಳು ಇರುವವು ಆಗಿವೆ (1:1; 4:7, 9-12, 14). ಲಭ್ಯವಿರುವ ಮಾಹಿತಿಯಿಂದ, ತುಖಿಕ ಮತ್ತು ಒನೆಸೀಮರು ಪತ್ರಗಳನ್ನು ಎಫೆಸದವರಿಗೂ (6:21, 22), ಕೊಲಸ್ಸೆಯರಿಗೂ (4:7-9) ಮತ್ತು ಫಿಲೊಮೋನನಿಗೆ (ವಚನಗಳು 10-12), ಕೊಡುವವರಾಗಿದ್ದರು ಮತ್ತು ಎಫಪ್ರದೋತ್ಯರು ಫಿಲಿಪ್ಪಿಯರಿಗೆ ಪೌಲನ ಸಂದೇಶವನ್ನು ಕೊಡುವದರ ಆಗಿದ್ದರು (2:25-30) ಎಂದು ಕಂಡುಬರುತ್ತದೆ.

ಪೌಲನು ತುಖಿಕನು ಎಫೆಸಕ್ಕೆ **ನಿಮಗೆ ಸಹ ಗೊತ್ತಾಗುವ ... ನೀವು ನಮ್ಮ ಸಮಾಚಾರವನ್ನು ತಿಳುಕೊಳ್ಳುವ ... ನಿಮ್ಮ ಹೃದಯಗಳನ್ನು ಸಂತೈಸುವ ಹಾಗೆಯೂ ಅವನನ್ನು** ಅವರ ಬಳಿಗೆ ಕಳುಹಿಸಿದ್ದನು. ಪೌಲನಿಂದ ವರ್ಣಿತವಾದ ತುಖಿಕನು **ಪ್ರಿಯ ಸಹೋದರನೂ ಕರ್ತನಲ್ಲಿ ನಂಬಿಗಸ್ತನಾದ ಸೇವಕನೂ ಆಗಿರುವ** ಎಂಬುದು ಪತ್ರವನ್ನು ಕಳುಹಿಸಲು ಮತ್ತು ಸತ್ಯವನ್ನು ಹೇಳಲು ವಿಶ್ವಾಸವಿಡಲು ಯೋಗ್ಯನು ಎಂದು ಸೂಚಿಸುವುದಾಗಿದೆ.

## ಶಾಂತಿ ಮತ್ತು ಸಮಾಧಾನದ ಹಾರೈಕೆ
## (6:23, 24)

**[23]ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ಶಾಂತಿಯೂ ನಂಬಿಕೆಯಿಂದ ಕೂಡಿದ ಪ್ರೀತಿಯೂ ಸಹೋದರರಿಗೆ ಆಗಲಿ. [24]ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ನಿರಂತರವಾದ ಪ್ರೀತಿಯಿಂದ ಪ್ರೀತಿಸುವವರೆಲ್ಲರ ಮೇಲೆ ದೇವರ ಕೃಪೆಯು ಇರಲಿ.**

**ವಚನಗಳು 23, 24.** ಪತ್ರವನ್ನು ಕೊನೆಗೊಳಿಸುವಿಕೆಯು ಪೌಲನ ಇತರ ಪತ್ರಿಕೆಗಳಂತೆಯೇ ಕೊನೆಗೊಳ್ಳುವುದಾಗಿದೆ. ಆತನು ಪತ್ರದ ಆರಂಭವನ್ನು "ಕೃಪೆ ... ನಮ್ಮ ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ" ಎಂದು ಪ್ರಾರ್ಥನೆಯೊಡನೆ ಈ ಪತ್ರವನ್ನು ಆರಂಭಿಸುತ್ತಾನೆ ಹೀಗೆ ಆತನು ತನ್ನ ಪತ್ರವನ್ನು ಕೊನೆಗೊಳಿಸುವಾಗಲೂ **ಶಾಂತಿ ಮತ್ತು ಸಮಾಧಾನ** ಎಂಬ ವಿಚಾರಗಳಿಂದ ಕೊನೆಗೊಳಿಸಿದ್ದಾನೆ. ದೇವರ ಕೃಪೆಯು ಜಗತ್ತಿಗೆ ರಕ್ಷಣೆಯನ್ನು ತರುವುದಾಗಿದೆ (2:8, 9), ಮತ್ತು ದೇವರ ವರದ ಸ್ವೀಕರಿಸುವಿಕೆಯು ವೈಯಕ್ತಿಕವಾಗಿ ಕ್ರೈಸ್ತನಲ್ಲಿ ಶಾಂತಿಯನ್ನು ತರುವುದಾಗಿದೆ (2:13-22). ಕೃಪೆಯು ಯೋಗ್ಯವಾದ ಪ್ರತಿಕ್ರಿಯೆಯು ಮತ್ತು ಕ್ರಿಸ್ತನಲ್ಲಿ ತೋರಿಬಂದ ಶಾಂತಿಯು **ಪ್ರೀತಿ** ಮತ್ತು **ನಂಬಿಕೆಯಲ್ಲಿ** ಒಂದೇ ಆಗಿದೆ. ಈ ಪರಿಚ್ಛೇದವು ಪ್ರೀತಿ ಮತ್ತು ನಂಬಿಕೆಯನ್ನು ಸೂಚಿಸುವುದಾಗಿದ್ದು ಇದು **ದೇವರಿಂದ** ಬರುವಂತದ್ದು ಆಗಿದೆ. ದೇವರ ಕೃಪೆಯು ಮತ್ತು ಪ್ರೀತಿಯು **ಕ್ರಿಸ್ತನನ್ನು** ಪ್ರೀತಿಸುವವರಲ್ಲಿ ಸಹ ವಿಸ್ತರಿಸುವವು ಆಗಿದೆ ಎಂದು ಪೌಲನು ಪ್ರಾರ್ಥಿಸುತ್ತಾನೆ.

ನಂಬಿಕೆಯ ಪ್ರತಿಕ್ರಿಯೆಯು, ಈ ಪತ್ರದಲ್ಲಿ ಎಲ್ಲೆಡೆಯೂ ಸೂಚಿಸಲ್ಪಟ್ಟಿದೆ (1:15; 2:8; 3:12, 17; 4:13; 6:16), ಯಾವಾಗಲೂ ಮನವರಿಕೆಯ, ವಿಶ್ವಾಸದ ಮತ್ತು ವಿಧೇಯತೆಯ ಪ್ರತಿಕ್ರಿಯೆ ಆಗಿದೆ (ನೋಡಿರಿ ಯಾಕೋಬ 2:13). ಪ್ರೀತಿಯು ದೇವರ ಚಿತ್ತವನ್ನು ಮಾಡಲು ಪ್ರೇರೇಪಿಸುವದು ಆಗಿದೆ (ನೋಡಿರಿ ಯೋಹಾನ 14:15; 2 ಕೊರಿಂಥ 5:14).

ವಚನ 24ರ **ಪ್ರೀತಿಯಿಂದ ಪ್ರೀತಿಸುವವರೆಲ್ಲರ ಮೇಲೆ** ಎಂಬ ಕೊನೆಯ ಮೂರು ಪದಗಳ ಮೇಲೆ ಲಕ್ಷವು ಕೊಡಲೇಬೇಕು. "ಪ್ರೀತಿ" ಎಂಬ ಪದವು ಭಾಷಾಂತರಕಾರರಿಂದ ಸೇರಿಸಲ್ಪಟ್ಟಿದ್ದು ಆಗಿದೆ. *Aphtharsia* ಎಂಬ ಪದವು "ನಾಶವಾಗದಂಥ" ಎಂದು ಸೂಚಿಸುವುದಾಗಿದೆ.[1] ಈ ಪದವು ರೋಮಾಪುರ 2:7ರಲ್ಲಿನ "ಶಾಶ್ವತವಾದ" ಎಂಬುದರಿಂದ ತೆಗೆದುಕೊಳ್ಳಲ್ಪಟ್ಟಿದ್ದು, ನಾಶವಾಗದಂತಹ ಮಹಿಮೆ ಮತ್ತು ನಿತ್ಯಜೀವದ ಮಹಿಮೆಯನ್ನು ಸೂಚಿಸುವುದಾಗಿದೆ. 1 ಕೊರಿಂಥ 15:42, 50, 53, 54ರಲ್ಲಿ, ಪುನರುತ್ಥಾನ ಹೊಂದಿದ ದೇಹದ "ಶುದ್ಧ" ದೇಹವನ್ನು ಸೂಚಿಸುವುದಾಗಿದೆ (NKJV); ಮತ್ತು 2 ತಿಮೋಥೆ 1:10ರಲ್ಲಿ ಸುವಾರ್ತೆಯ ಮೂಲಕ ಬೆಳಕನ್ನು ತರುವ "ಶಾಶ್ವತತೆಯ" ಬಗೆಗೆ ಮಾತನಾಡುತ್ತದೆ. *Aphtharsia*ದ ಪೌಲನ ಬಳಿಕೆಯು ಇದನ್ನು "ಪ್ರಾಮಾಣಿಕತೆ" ಎಂದು ಭಾಷಾಂತರಿಸುವದನ್ನು ತೀರ್ಮಾನಿಸುವುದಾಗಿದೆ (KJV ಮತ್ತು NKJVಯಲ್ಲಿ ಇದು ಕಂಡುಬರುವಂತೆ).

"ಶುದ್ಧ"ತೆಯ ಗುಣವು ಪೌಲನು ಮಾತನಾಡುವಂಥ ದೇವರ ಶುದ್ಧತೆಯ ವರ್ಣನೆಯು ಅಲ್ಲ, ಅಥವಾ "ಕೃಪೆಯ" ಶಾಶ್ವತ ಸ್ವಭಾವವೂ ಅಲ್ಲ. ಇದು ನಂಬಿಗಸ್ತ ಕ್ರೈಸ್ತರಿಗೆ ಕೊಡಲ್ಪಟ್ಟಂಥ ನಿತ್ಯಜೀವಿತದ ಬಗೆಗೆ ಇದು ಮಾತನಾಡುವದು ಇಲ್ಲ. ಬದಲಾಗಿ ಈ ವಿಷಯದ ನಿತ್ಯತೆಯು "ಪ್ರೀತಿ" ಯೊಂದಿಗೆ ಸೇರುವುದಾಗಿದ್ದು, ಇದರ ಯೋಗ್ಯವಾದದ್ದು "[ಕ್ರಿಸ್ತೀಯ] ಪ್ರೀತಿಯ ನಿಶ್ಚಿತ ಮಾರ್ಗವಾದಂಥದ್ದು ಅಥವಾ ಅವರ ಪ್ರೀತಿಯು ಇರುವಿಕೆಯ ಅಂಶವು ಆಗಿದೆ. ಈ ಪ್ರೀತಿಯು 'ಯಾವುದೇ ಬದಲಾವಣೆಯು ಇಲ್ಲದ್ದು ... ಅಥವಾ ನಾಶವಾ

ಗದ್ದೂ ಆಗಿದೆ.'''[2] ಆ ಎಲ್ಲವುಗಳೂ "ನಮ್ಮ ಕರ್ತನಾದ ಯೇಸು ಕ್ರಿಸ್ತನ ಜೊತೆಯ ನಾಶವಾಗದ ಪ್ರೀತಿಯು" ಆಗಿದ್ದು, ಆ ಪ್ರೀತಿಯು ಬದಲಾಗದು ಅಥವಾ ಕೊಳೆತುಹೋಗದ್ದು ಆಗಿದ್ದು ದೇವರ ಕೃಪೆಯನ್ನು ಪಡೆದುಕೊಳ್ಳುವದು ಆಗಿದೆ.

## ಅನ್ವಯ

**ಹೆಸರಿಸಲಾರದ ನಾಯಕರು (6:21-24)**

ಇತರ ಪತ್ರಿಕೆಗಳಲ್ಲಿರುವಂತೆ ಎಫೆಸದವರಿಗೆ ಪೌಲನ ಅಂತ್ಯಾಶೀರ್ವಾದದರಲ್ಲಿ, ಸಭೆಯಲ್ಲಿ ಆತನ ಜೊತೆ ಕೆಲಸದವರ ಹೆಸರುಗಳು ಇರುವವು ಆಗಿವೆ. ಸುವಾರ್ತೆಯನ್ನು ಜಗತ್ತಿಗೆ ತರುವಲ್ಲಿ ಹೆಸರಿಸಲಾಗದ ಪರಿಣಾಮಕಾರಿಯೂ ಮತ್ತು ನಂಬಿಗಸ್ತರಾಗಿಯೂ ಯಾವುದೇ ರೀತಿಯಲ್ಲಿ ಗುರುತಿಸಲಾಗದ ಸುವಾರ್ತೆಯ ನಾಯಕರನ್ನು ಮನದಲ್ಲಿ ಇಟ್ಟುಕೊಂಡು ಈ ಅಂತ್ಯಾಶೀರ್ವಾದವು ಇರುವುದಾಗಿದೆ.

ನಂಬಿಕೆಯ ವೀರರು ಹಲವು ಬಾರಿ ವೇದಭಾಗದಲ್ಲಿ ಹೆಸರಿಸಲ್ಪಟ್ಟಿಲ್ಲ. ಅಪೋಸ್ತಲರ ಕೃತ್ಯಗಳು 11:19-26ರಲ್ಲಿ ಅನ್ಯ ಜನರಿಗೆ ಮಾನವ ಮಧ್ಯವರ್ತಿಯಿಂದ ಮೊದಲ ಬಾರಿಗೆ ಬೋಧಿಸಲ್ಪಟ್ಟಿತು. ಹಿಂದೆ ಫಿಲಿಪ್ಪನು ಸಮಾರ್ಯದವರಿಗೆ ಬೋಧಿಸಿದ್ದನು, ಆದರೆ ಅವರು ಅರ್ಧ ಯೆಹೂದಿಗಳು ಆಗಿದ್ದರು. ಪೇತ್ರನು ಅನ್ಯನಾದ ಕೋರ್ನೆಲ್ಯನಿಗೆ ಬೋಧಿಸಿದನು, ಆದರೆ ಅದು ದೇವರ ಮಧ್ಯಸ್ಥಿಕೆಯಿಂದ. ಅಪೊಸ್ತಲರ ಕೃತ್ಯಗಳು 11ರಲ್ಲಿ ಆದಿ ಸಭೆಯಲ್ಲಿ ಘಟಿಸಿದ ಒಂದು ಮಹತ್ವದ ಘಟನೆಯನ್ನು ನಾವು ನೋಡುತ್ತೇವೆ ಅದು ಸುವಾರ್ತೆಯು ಅನ್ಯಜನರ ಊರಾದ ಅಂತಿಯೋಕ್ಯಕ್ಕೆ ಹೋಗಿದ್ದು ಮತ್ತು ಅಲ್ಲಿಂದ ಸಭೆಯು ಸ್ಥಾಪಿಸಲ್ಪಟ್ಟಿತು, ಪೌಲನು ಸಮಸ್ತ ರೋಮದ ಜಗತ್ತಿಗೆ ಸುವಾರ್ತೆಯನ್ನು ತೆಗೆದುಕೊಂಡು ಹೋಗಲು ಮೂರು ಶ್ರೇಷ್ಟ ಸುವಾರ್ತಾ ಪ್ರಯಾಣಗಳನ್ನು ಮಾಡಿದನು ಹೇಗೋ, ಅಲ್ಲಿ ಪ್ರಾರಂಭಿಸಿದಂಥವನ ಹೆಸರು ಮಾತ್ರ ಸೂಚಿತವಾಗಿಲ್ಲ.

ಕ್ರಿಸ್ತನಲ್ಲಿಯ ಅನೇಕ ಸಹೋದರರು ಮತ್ತು ಸಹೋದರಿಯರು ಪೌಲನಿಗೆ ಸಹಾಯಿಸಿದರೋ. ಸೆರೆಮನೆಯ ಪತ್ರಗಳಲ್ಲಿ - ಎಫೆಸದವರಿಗೆ, ಫಿಲಿಪ್ಪಿಯರಿಗೆ, ಕೊಲಸ್ಸೆಯವರಿಗೆ ಮತ್ತು ಫಿಲಮೋನನಿಗೆ ಎಂಬಲ್ಲಿ ಆತನು ತನಗೆ ಪ್ರಮುಖವಾದ ಮತ್ತು ಕ್ರಿಸ್ತನಿಗೆ ಕಾರಣವಾಗಿರುವಂಥವರಿಗೆ ಒಂದು ಡಝನ್ ಸಹ ಯೋಗಿಗಳನ್ನು ಸೂಚಿಸಿದ್ದಾನೆ. ಆತನು ಅವರಿಗೆ ಅಲ್ಪವಾಗಿ ಹೇಳಿದ್ದಾನೆ, ಆದರೆ ಅವರು ಕರ್ತನ ಕಾರ್ಯಕ್ಕಾಗಿ ಆತನ ಕೆಲಸದಲ್ಲಿ ಪೌಲನಿಗೆ ಅವರು ಸಹಾಯಮಾಡುವವರಾಗಿದ್ದವರೂ ಆಗಿದ್ದರು.

ಸಭೆಯು ಕ್ರಿಸ್ತನ "ದೇಹ"ವಾಗಿರುವ ಈ ದೃಷ್ಟಾಂತವು (ರೋಮಾಪುರ 12; 1 ಕೊರಿಂಥ 12) ದೇಹದ ಎಲ್ಲಾ ಅಂಗಗಳು ಪ್ರಧಾನವಾಗಿವೆ. ಅವರು ಸಭೆಯಲ್ಲಿ ಕಾರ್ಯಮಾಡುತ್ತಿರುವಂತೆಯೇ, ಸದಸ್ಯರು ಅವನ ಅಥವಾ ಅವಳು ತನ್ನ ಪಾತ್ರವನ್ನು ದೇಹದ ಕಾರ್ಯವು ಯೋಗ್ಯವಾಗಿ ಕಾರ್ಯಮಾಡುವದಾಗಿದೆ ಎಂದು ಕ್ರೈಸ್ತರು ನೆನಪಿಟ್ಟುಕೊಳ್ಳಬೇಕು (4:16). ನಮ್ಮಲ್ಲಿ ಎಲ್ಲರ ಹೆಸರುಗಳು ಪ್ರಮುಖ ಸಾಲಿನಲ್ಲಿ ಹೊಂದಿರಬೇಕಿಲ್ಲ ಅಥವಾ ಇತರರಿಂದ ನೆನಪಿಟ್ಟುಕೊಳ್ಳಬೇಕೆಂಬುದು ಇಲ್ಲ, ಆದರೆ ನಮ್ಮೆಲ್ಲರ ಹೆಸರುಗಳು ಜೀವಕರವಾದ ಪುಸ್ತಕದಲ್ಲಿ ಬರೆಯಲ್ಪಟ್ಟಿದೆ ಮತ್ತು ದೇವರಿಂದ ನೆನಪಿಡಲ್ಪಡುವದು ಆಗಿದೆ. ಈ ಎಲ್ಲಾ ತುಖಿಖರಿಗೂ ಪೌಲರಂಥವರಿಗೂ ಬೆಂಬಲಿಸಿದ ಮತ್ತು ಸಹಾಯ ಮಾಡಿದಂಥವರಿಗೆ ನಾವು ಉಪಕೃತರಾಗಿರಬೇಕು. ನಾವು ಜೊತೆಯಾಗಿ ಕೆಲಸಮಾಡುವಾಗ, ನಾವು ಮುಂದಿರಲಿ ಅಥವಾ ನೆರಳಾಗಿರಲಿ, ನಾವು ದೇವರಿಂದ ಆಶೀರ್ವದಿಸಲ್ಪಟ್ಟವರು ಆಗಿದ್ದೇವೆ ಮತ್ತು ಆತನ ರಾಜ್ಯದ ಕಾರ್ಯವು ಮಾಡಲ್ಪಡುತ್ತದೆ.

Jay Lockhart

ಟಿಪ್ಪಣಿಗಳು

[1]Andrew T. Lincoln, *Ephesians,* Word Biblical Commentary, vol. 42 (Dallas: Word Books, 1990), 467; see also Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick William Danker (Chicago: University of Chicago Press, 2000), 155. [2]S. D. F. Salmond, "The Epistle to the Ephesians," in *The Expositor's Greek Testament,* ed. W. Robertson Nicoll (Grand Rapids, Mich.: Wm. B. Eerdmans Publishing Co., 1967), 3:395-96; Salmond cited Charles John Ellicott, *St. Paul's Epistle to the Ephesians: With a Critical and Grammatical Commentary, and a Revised Translation,* 5th ed. (London: Longmans, Green & Co., 1884), 159.